ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಬಿ.ಎಂ.ಹೆಗ್ಡೆ ಪದ್ಮವಿಭೂಷಣ, ಕಂಬಾರರಿಗೆ ಪದ್ಮಭೂಷಣ, ರಾಜ್ಯದ ಮೂವರಿಗೆ ಪದ್ಮಶ್ರೀ

## 7 ಪದ್ಮವಿಭೂಷಣ, 10 ಪದ್ಮ ಭೂಷಣ, 102 ಪದ್ಮಶ್ರೀ ಪ್ರಶಸ್ತಿ ಗೌರವ

**ಕರ್ನಾಟಕದ ಐವರು ಸಾಧಕರಿಗೆ ಪದ್ಮಗರಿ**





ಡಾ.ಬಿ.ಎಂ.ಹೆಗ್ಡೆ
**ಪದ್ಮವಿಭೂಷಣ**
(ವೈದ್ಯಕೀಯ)



ಡಾ.ಚಂದ್ರಶೇಖರ ಕಂಬಾರ
**ಪದ್ಮ ಭೂಷಣ**
(ಸಾಹಿತ್ಯ ಮತ್ತು ಶಿಕ್ಷಣ)



ಮಂಜಮ್ಮ ಜೋಗತಿ
**ಪದ್ಮಶ್ರೀ**
(ಕಲೆ)



ರಂಗಸ್ವಾಮಿ ಕಶ್ಯಪ್
**ಪದ್ಮಶ್ರೀ**
(ಸಾಹಿತ್ಯ ಮತ್ತು ಶಿಕ್ಷಣ)



ಕೆ.ವೈ.ವೆಂಕಟೇಶ್
**ಪದ್ಮಶ್ರೀ**
(ಕ್ರೀಡೆ)

**ದೆಹಲಿ:** ರಾಜ್ಯದ ಖ್ಯಾತ ವೈದ್ಯ ಡಾ.ಬಿ.ಎಂ.ಹೆಗ್ಡೆ ಅವರು ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ್ ಕಂಬಾರ ಅವರಿಗೆ ಪದ್ಮಶ್ರೀ ಪ್ರಶಸ್ತಿಯ ಗೌರವ ದೊರೆತಿದೆ. ಇದಲ್ಲದೇ, ರಾಜ್ಯದ ಮೂವರು ಸಾಧಕರು ಪದ್ಮಶ್ರೀ ಪುರಸ್ಕೃತರ ಪಟ್ಟಿಯಲ್ಲಿ ಸೇರಿದ್ದಾರೆ. 72ನೇ ಗಣರಾಜ್ಯೋತ್ಸವದ ಮುನ್ನಾ ದಿನ ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳನ್ನು ಸರಕಾರ ಪ್ರಕಟಿಸಿದೆ.

### ಪದ್ಮವಿಭೂಷಣ ಪ್ರಶಸ್ತಿ

- ಜಪಾನ್ ಮಾಜಿ ಪ್ರಧಾನಿ ಶಿನ್ಜೊ ಅಬೆ
- ವೈದ್ಯಕೀಯ ಕ್ಷೇತ್ರದಲ್ಲಿ ಕರ್ನಾಟಕದ ಡಾ.ಬಿ.ಎಂ.ಹೆಗ್ಡೆ
- ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ (ಮರಣೋತ್ತರ)
- ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ನರಿಂದರ್ ಸಿಂಗ್ ಕಪಾನಿ (ಮರಣೋತ್ತರ)-ಅಮೆರಿಕ
- ಆಧ್ಯಾತ್ಮ- ಮೌಲಾನಾ ವಹೀದುದ್ದೀನ್ ಖಾನ್-ದೆಹಲಿ
- ಪುರಾತತ್ವ ಶಾಸ್ತ್ರ-ಬಿ.ಬಿ.ಲಾಲ್-ದೆಹಲಿ
- ಕಲೆ-ಸುದರ್ಶನ್ ಸಾಹೋ-ಒಡಿಶಾ

### ಪದ್ಮಭೂಷಣ ಪ್ರಶಸ್ತಿ

- ತರುಣ್ ಗೊಗೊಯ್: ಸಾರ್ವಜನಿಕ ಕ್ಷೇತ್ರ-ಅಸ್ಸಾಂ (ಮರಣೋತ್ತರ)
- ಚಂದ್ರಶೇಖರ ಕಂಬಾರ : ಸಾಹಿತ್ಯ ಮತ್ತು ಶಿಕ್ಷಣ- ಕರ್ನಾಟಕ
- ಸುಮಿತ್ರಾ ಮಹಾಜನ್: ಸಾರ್ವಜನಿಕ ಕ್ಷೇತ್ರ-ಮಧ್ಯಪ್ರದೇಶ
- ನೃಪೇಂದ್ರ ಮಿಶ್ರಾ: ನಾಗರಿಕ ಸೇವೆ-ಉತ್ತರ ಪ್ರದೇಶ
- ರಾಮ್ ವಿಲಾಸ್ ಪಾಸ್ವಾನ್: ಸಾರ್ವಜನಿಕ ಕ್ಷೇತ್ರ-ಬಿಹಾರ (ಮರಣೋತ್ತರ)
- ಕೇಶುಭಾಯ್ ಪಟೇಲ್: ಸಾರ್ವಜನಿಕ ಕ್ಷೇತ್ರ-ಗುಜರಾತ್ (ಮರಣೋತ್ತರ)
- ಕಲ್ಬೆ ಸಾದಿಕ್: ಆಧ್ಯಾತ್ಮ- ಉತ್ತರ ಪ್ರದೇಶ (ಮರಣೋತ್ತರ)
- ರಜನಿಕಾಂತ್ ದೇವಿದಾಸ್ ಶ್ರಾಫ್: ವಾಣಿಜ್ಯ ಮತ್ತು ಕೈಗಾರಿಕೆ-ಮಹಾರಾಷ್ಟ್ರ
- ತರ್ಲೋಚನ್ ಸಿಂಗ್: ಸಾರ್ವಜನಿಕ ಕ್ಷೇತ್ರ-ಹರಿಯಾಣ
- ಕೃಷ್ಣನ್ ನಾಯರ್ ಶಾಂತಾಕುಮಾರಿ ಚಿತ್ರಾ ಕಲೆ-ಕೇರಳ

---

- ಗಣರಾಜ್ಯೋತ್ಸವದ ಅಂಗವಾಗಿ ನೀಡಲಾಗುವ ರಾಷ್ಟ್ರಪತಿಗಳ ಪದಕಕ್ಕೆ ಈ ವರ್ಷ ಒಟ್ಟು 207 ಪೊಲೀಸ್ ಪದಕಗಳು ಮತ್ತು 89 ರಾಷ್ಟ್ರಪತಿಗಳ ಪೊಲೀಸ್ ಪದಕ ಹಾಗೂ ಶ್ರೇಷ್ಠ ಸೇವೆಗಾಗಿ 650 ಪೊಲೀಸ್ ಪದಕಗಳನ್ನು ನೀಡಲಾಗುತ್ತಿದೆ.
- ರಾಷ್ಟ್ರಪತಿಗಳ ಪೊಲೀಸ್ ಪದಕ(ಪಿಪಿಎಂಜಿ) ಶೌರ್ಯ ಪ್ರಶಸ್ತಿಗೆ ಇಬ್ಬರು ಭಾಜನರಾಗಿದ್ದು, ಅವರಲ್ಲಿ ಸಿಆರ್‌ಪಿಎಫ್‌ನ ಮೋಹನ್ ಲಾಲ್ ಮತ್ತು ಜಾರ್ಖಂಡ್ ಪೊಲೀಸ್ ಎಎಸ್‌ಐ ಬನುವಾ ಒರಾನ್ ಅವರಿಗೆ ನೀಡಲಾಗಿದೆ. ಎರಡನೇ ಅತ್ಯುನ್ನತ ಪೊಲೀಸ್ ಪದಕ ಶೌರ್ಯ ಅಥವಾ ಪಿಎಂಜಿ ಪದಕವನ್ನು 205 ಸಿಬ್ಬಂದಿಗೆ ನೀಡಲಾಗಿದೆ.
- ಕರ್ನಾಟಕದ 19 ಪೊಲೀಸರಿಗೆ ಈ ಬಾರಿ ರಾಷ್ಟ್ರಪತಿ ಪದಕ ಪ್ರದಾನ ಮಾಡಲಾಗುವುದು.

---

ನನಗೆ ಸಂದ ಈ ಗೌರವವನ್ನು ಭುವನೇಶ್ವರಿಗೆ ಅರ್ಪಿಸುತ್ತೇನೆ. ಕನ್ನಡಕ್ಕಾಗಿ ಸೇವೆ ಮಾಡುವ ಅಗತ್ಯವಿದೆ. ಕನ್ನಡ ಭಾಷೆಯನ್ನು ಎತ್ತಿ ಹಿಡಿಯದೇ ಹೋದರೆ ಆಂಗ್ಲಭಾಷೆ ನಮ್ಮ ಕನ್ನಡ ಭಾಷೆಯನ್ನು ನುಂಗಿ ಬಿಡುತ್ತದೆ. ನಮ್ಮ ಕನ್ನಡ ಭಾಷೆಗಾಗಿ ನನ್ನಿಂದಾದ ಕೊಡುಗೆ ನೀಡಿದ್ದೇನೆ. ಮುಂದೆಯೂ ನೀಡುತ್ತೇನೆ. ಈ ಪ್ರಶಸ್ತಿಯನ್ನು ಕನ್ನಡ ಸರಸ್ವತಿಗೆ ದೊರಕಿದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಶಿಕ್ಷಣ ಕನ್ನಡದಲ್ಲೇ ಆದರೆ ಸ್ವಂತಿಕೆಯನ್ನು, ಸೃಜನಶೀಲತೆಯನ್ನು ಉಳಿಸಿಕೊಳ್ಳುತ್ತಾರೆ. ಜತೆಗೆ ನಮ್ಮ ಕನಸುಗಳಿಗೂ ಗೌರವ ನೀಡುತ್ತಾರೆ.

– **ಚಂದ್ರಶೇಖರ ಕಂಬಾರ** ಪದ್ಮಭೂಷಣ ಪುರಸ್ಕೃತ ಸಾಹಿತಿ